'ಅದೆಲ್ಲಾ ಸರಿ, ನೀನು ನಿನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿ ಈ ಪ್ರಸಂಗಕ್ಕೆ ಯಾಕೆ ಬಲಿಯಾದೆ?'

ಅಬ್ದುಲ್ಲಾ ಶಾಂತ ಸ್ವರದಿಂದ ಉತ್ತರಿಸಿದ,

'ಋಣ ಸಂದಾಯಕ್ಕಾಗಿ. ಅದಕ್ಕಿಂತಲೂ ಮುಖ್ಯವಾದ ಕಾರಣವೊಂದಿದೆ. ನಿಜ ಹೇಳಿದರೆ ನಿನಗೆ ಆಘಾತವಾಗಬಹುದು. ತಡೆಯುವ ಶಕ್ತಿ ಉಂಟಾ ನಿನಗೆ?'

'ನನಗೆ ಆಘಾತಗಳನ್ನೆಲ್ಲಾ ಸಹಿಸಿ ಅಭ್ಯಾಸವಾಗಿದೆ. ನೋವೆಂಬುದೇ ಇಲ್ಲದ ಜೀವಕ್ಕೆ ತಡೆದುಕೊಳ್ಳುವ ಪ್ರಶ್ನೆಯೇ ಏಳುವುದಿಲ್ಲ. ಏನಿದ್ದರೂ ನೇರವಾಗಿ ಹೇಳಿಬಿಡು' ಎಂದಳು ಸಲ್ಮಾ ಉದಾಸೀನತೆಯಿಂದ.

'ಹಾಗಾದರೆ ಪ್ರಥಮಬಾರಿ ನನ್ನ ನಾಲಗೆ ಇದನ್ನು ಹೇಳುತ್ತಿದೆ– ಸಲ್ಮಾ... ನಾನು ನಿನ್ನನ್ನು ಪ್ರೀತಿಸುತ್ತೇನೆ. ನೀನು ನನ್ನ ಕೈಗೆಟುಕುವವಳಲ್ಲ ಎಂದು ತಿಳಿದಿದ್ದರೂ ಇದನ್ನು ತಡೆಹಿಡಿಯಲಾರದವನಾಗಿದ್ದೇನೆ. ಅದು ಎಲ್ಲಿ ಚಿಮ್ಮಿ ಹೊರಬರುವುದೋ ಎಂದು ಹೆದರಿ ಹಿಡಿತದಲ್ಲಿಟ್ಟುಕೊಂಡು ಜಾಗರೂಕನಾಗಿದ್ದೇನೆ. ನಿನಗೆ ನನ್ನಲ್ಲಿ ಅಂತಹ ಭಾವನೆ ಎಳ್ಳಷ್ಟೂ ಇರಲಿಲ್ಲವೆಂತ ನನಗೆ ತಿಳಿದಿತ್ತು. ನಿನ್ನ ಮದುವೆಯಾದರೂ ನನ್ನ ಮನಸ್ಸಿನಲ್ಲಿ ನೀನೇ ತುಂಬಿದ್ದೆ. ನಿನ್ನ ತಂದೆ ನಮ್ಮ ಸಲ್ಮಾಳನ್ನು ಒಂದು ದಿನದ ಮಟ್ಟಿಗೆ ಮದುವೆ ಆಗುತ್ತೀಯಾ ಎಂದು ಕೇಳಿದಾಗ ಗರಬಡಿದವನಂತಾಗಿದ್ದೆ. ನನ್ನ ಆಸೆ ಹೀಗಾದರೂ ನೇರವೇರುವುದು ಕ್ರಮೇಣ ನನಗೆ ಖುಷಿ ತಂದಿತು. ನನ್ನ ಬಾಳಿನ ಈ ರಾತ್ರಿ ಎಷ್ಟು ಆನಂದದ ಬೆಳಕೋ... ಅಷ್ಟೇ ನಾಳಿನ ಹಗಲು ಅಂಧಕಾರದ ಗವಿಯಾಗಲಿದೆ...'

ಅವನಿಗರಿವಿಲ್ಲದಂತೆ ಅವನು ಅವಳ ಕೈಯನ್ನು ಬಿಗಿಯಾಗಿ ಹಿಡಿದಿದ್ದ. ಸಲ್ಮಾ ಕೂಡ ತನ್ನ ಬದುಕು ಈ ರೀತಿಯ ತಿರುವು ಕಾಣುತ್ತದೆಂಬುದುದನ್ನು ಕಲ್ಪಿಸಿರಲಿಲ್ಲ. ಅವಳು ಮೌನವಾಗಿ ಎತ್ತಲೋ ನೋಡುತ್ತಿದ್ದಳು.

ಅಬ್ದುಲ್ಲಾ ವಾಸ್ತವಕ್ಕೆ ಬಂದಾಗ ತಪ್ಪು ಮಾಡಿದವನಂತೆ ಕೈಬಿಟ್ಟು ದೂರ ಸರಿದ.

ಸಲ್ಮಾ ಬೆಳಗಿನ ಜಾವದ ಕೋಳಿಯ ಮೊದಲ ಕೂಗು ಕೇಳಿಬರುವ ತನಕ ಹಾಗೆಯೇ ಯೋಚಿಸುತ್ತಾ ಕುಳಿತಿದ್ದಳು. ಅಬ್ದುಲ್ಲಾ ಹಾಸಿಗೆಯ ಮೇಲೆ ಒರಗಿದ್ದ. ಅವನಿಗೂ ನಿದ್ದೆ ಬಂದಿರಲಿಲ್ಲ.

ಒಮ್ಮೆಲೇ ಏನೋ ನಿರ್ಧಾರಕ್ಕೆ ಬಂದವಳಂತೆ ಸಲ್ಮಾ ಅವನತ್ತ ತಿರುಗಿ ಕೇಳಿದಳು,

'ನಾಳೆ ಅವರು ಹೇಳಿದಂತೆ ತಲಾಕ್ ಕೊಡದೆ ಗಟ್ಟಿಯಾಗಿ ನನ್ನ ಕೈಹಿಡಿದು ನಿಲ್ಲುವ ಶಕ್ತಿ ನಿನಗೆ ಉಂಟಾ?'

ಅಬ್ದುಲ್ಲಾ ತಟ್ಟನೆ ಎದ್ದು ಕುಳಿತು ಉತ್ತರಿಸಿದ ಖಚಿತ ಸ್ವರದಲ್ಲಿ,

'ನೀನು ಜತೆಯಾಗಿ ನಿಂತರೆ ಸ್ವತಹ ನಾನೇ ಆಶ್ಚರ್ಯಪಡುವಷ್ಟು ಧೈರ್ಯವಿರುತ್ತದೆ ನನ್ನಲ್ಲಿ...'

ಸಲ್ಮಾ ಅವನ ಹತ್ತಿರ ಬಂದು ಅವನನ್ನು ಗಟ್ಟಿಯಾಗಿ ತಬ್ಬಿಕೊಂಡಳು. ಅಬ್ದುಲ್ಲಾ ಕೂಡಾ ಅವಳನ್ನು ಇನ್ನಷ್ಟು ಅಪ್ಪಿಕೊಂಡು ಮುದ್ದಿಸುತ್ತಾ. ಲೆಕ್ಕವಿಲ್ಲದಷ್ಟು ಸಲ ಹೇಳಿದ 'ಸಲ್ಮಾ... ನಿನ್ನನ್ನು ನಾನು ತುಂಬಾ ಪ್ರೀತಿಸುತ್ತೇನೆ.'

ಜೀವಗಳೆರಡೂ ಒಂದಾದಾಗ ಹೊಸಬೆಳಕು ಹುಟ್ಟಿತು. ಅದು ನಾಳಿನ ಅಂಧಕಾರವನ್ನು ಎದುರಿಸುವ ಬೆಳಕು. ಜಗತ್ತನ್ನೇ ಎದುರಿಸುವ ಧೈರ್ಯದ ಬೆಳಕು.

⌘